**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಯವರ ನ್ಯಾಯಾಲಯ, ಚನ್ನಗಿರಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 3827/2024**

| ಪಿರ್ಯಾದುದಾರರು : | ವಿರುದ್ಧ | ಆರೋಪಿತರು: |
|---|---|---|
| ಚನ್ನಗಿರಿ ಪೊಲೀಸ್ ಠಾಣೆ | | ಎ1. ಪ್ರದೀಪ ಬಿ ಬಿನ್ ಬಸವರಾಜಪ್ಪ<br>ವಯಸ್ಸುಃ 19 ವರ್ಷ<br>ಎ2. ಬಸವರಾಜಪ್ಪ ಬಿನ್ ಲೇಟ್ ಸೂರಪ್ಪ<br>ವಯಸ್ಸುಃ 52 ವರ್ಷ<br>ವಾಸಃ ಸಂತೆಬೀದಿ , ನಲ್ಲೂರು ಗ್ರಾಮ, ಚನ್ನಗಿರಿ ತಾಃ ದಾವಣಗೆರೆ ಜಿಲ್ಲೆ |

**<u>ದೋಷಾರೋಪಣೆ</u>**

**ಶ್ರೀ ಕೆಂಚನಗೌಡ ಪಾಟೀಲ, 1**ನೇ ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ, ಚನ್ನಗಿರಿ ಆದ ನಾನು ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೆಯದಾಗಿ ದಿಃ 21-11-2022 ರಂದು ಸಂಜೆ 6.00 ಗಂಟೆಗೆ 1ನೇ ಆರೋಪಿಯಾದ ನೀನು ನಲ್ಲೂರು ಗ್ರಾಮದ ಉರ್ದುಶಾಲೆಯ ಮುಂಭಾಗದಲ್ಲಿ ಚಾಲನೆ ಮಾಡುತ್ತಿದ್ದ ಕೆಎ-17/ಹೆಚ್ ಎಫ್-3682 ನೇ ಬೈಕ್ ನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿರುತ್ತೀರ, ಆ ಮೂಲಕ ಭಾ.ದಂ.ಸಂ.ಕಲಂ 279 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಅರೋಪಿಯಾದ ನೀನು ಮೇಲೆ ಹೇಳಿದ ವಾಹನವನ್ನು ನಲ್ಲೂರು ಗ್ರಾಮದ ಉರ್ದುಶಾಲೆಯ ಮುಂಭಾಗದ ರಸ್ತೆಯ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ರೇಣುಕಮ್ಮರವರಿಗೆ ಡಿಕ್ಕಿಪಡಿಸಿದ ಪರಿಣಾಮ ರೇಣುಕಮ್ಮರವರಿಗೆ ತಲೆಗೆ ಮುಖಕ್ಕೆ ಹಾಗೂ ಮೈ ಕೈ ಗೆ ಪೆಟ್ಟು ಬಿದ್ದಿದ್ದು, ಅಲ್ಲೆ ಇದ್ದ ಚಾಸಾ-1 ಹಾಗೂ 2 ರವರು ಉಪಚರಿಸಿ ಕಾರಿನಲ್ಲಿ ಚನ್ನಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯೆ ರೇಣುಕಮ್ಮನವರು ಮೃತಪಡಲು ಕಾರಣರಾಗಿರುತ್ತೀರಿ. ಆ ಮೂಲಕ ಭಾ.ದಂ.ಸಂ.ಕಲಂ 304(ಎ) ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಅರೋಪಿಯಾದ ನಿನಗೆ ವಾಹನ ಚಾಲನೆ ಮಾಡಲು ಯಾವುದೇ ಚಾಲನಾ ಪರವಾನಿಗೆ ಇಲ್ಲದ್ದೆ ಇದ್ದರು ಸಹ ಮೇಲೆ ಹೇಳಿದ ಬೈಕ್‌ನ್ನು ಚಾಲನೆ ಮಾಡಿದ್ದು, ಆ ಮೂಲಕ ಮೋ. ವಾ, ಕಾಯ್ದೆ ಕಲಂ 181 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 2ನೇ ಅರೋಪಿಯಾದ ನೀನು 1ನೇ ಆರೋಪಿಗೆ ಮೇಲೆ ಹೇಳಿದ ಬೈಕ್‌ನ್ನು ವಾಹನ ಚಾಲನೆ ಮಾಡಲು ಯಾವುದೇ ಚಾಲನಾ ಪರವಾನಿಗೆ ಇಲ್ಲದ್ದೆ ಇದ್ದರು ಸಹ ಮೇಲೆ ಹೇಳಿದ ನಿನ್ನ ಮಾಲೀಕತ್ವದ ಬೈಕ್‌ನ್ನು ಚಾಲನೆ ಮಾಡಲು ಕೊಟ್ಟಿರುತ್ತೀರಿ, ಆ ಮೂಲಕ ಮೋ. ವಾ, ಕಾಯ್ದೆ ಕಲಂ 180 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

(ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ)

ದಿನಾಂಕ: 06-06-2026

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ. ಚನ್ನಗಿರಿ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚನ್ನಗಿರಿ**

**ಸಿಸಿ ನಂ: 3827/2024**

**1. ಕರ್ನಾಟಕ ಸರ್ಕಾರ (ಚನ್ನಗಿರಿ ಪಿ.ಎಸ್ )**

**ವಿರುದ್ಧ**

ಎ1. ಪ್ರದೀಪ ಬಿ ಬಿನ್ ಬಸವರಾಜಪ್ಪ

ವಯಸ್ಸುಃ 19 ವರ್ಷ

## ಆರೋಪಿಯ ಹೇಳಿಕೆ

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದೆನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತಳಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 06-06-2026 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ದಿನಾಂಕ: 06-06-2026

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

**ಮತ್ತು ಜೆಎಂಎಫ್‌ಸಿ. ಚನ್ನಗಿರಿ.**